C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 102/2022

**ಚಾ.ಸಾ.–10 ಪ್ರಾ.ಸಾ.–11**

| | |
|---|---|
| **ಸಾಕ್ಷಿದಾರರ ಹೆಸರು** | **ಬಸವರಾಜು** |
| **ತಂದೆಯ ಹೆಸರು** | **ಕರಿಯಯ್ಯ** |
| **ವಯಸ್ಸು** | **40 ವರ್ಷಗಳು** |
| **ಉದ್ಯೋಗ** | **ಗಾರೆ ಕೆಲಸ** |
| **ವಾಸ** | **ರಾಗಿಮುದ್ದನಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 04.04.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನನಗೆ ಈಗ ತೋರಿಸಿದ ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–3(ಸಿ)** ಎಂದು ಗುರುತಿಸಲಾಗಿದೆ. ಸದರಿ ಸಹಿಯನ್ನು ಶ್ರೀರಂಗಪಟ್ಟಣ ಪೋಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ಚಾಸಾ-1 ಮತ್ತು ಪಾಂಡವಪುರ ದೇವೇಗೌಡನಕೊಪ್ಪಲುವಿನಲ್ಲಿರುವ ಒಬ್ಬ ಮನೆಯ ಮಾಲೀಕನ ನಡುವೆ ಜಗಳದ ಪ್ರಕರಣದ ಬಗ್ಗೆ ಮಹಜರಿನಲ್ಲಿ ಸಹಿ ಮಾಡಿರುತ್ತೇನೆ. ಪೋಲೀಸರಿಗೆ ಯಾರು ಸ್ಥಳವನ್ನು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

2. ನನಗೆ ಈಗ ತೋರಿಸಿದ ಮತ್ತೊಂದು ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು

ಗುರುತಿಸಿರುವ ಅವರ ಸಹಿಯನ್ನು **ನಿಪಿ-2(ಬಿ)** ಎಂದು ಗುರುತಿಸಲಾಗಿದೆ. ಸದರಿ ಸಹಿಯನ್ನು ಸಹಾ ಶ್ರೀರಂಗಪಟ್ಟಣ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದೇ ವಿಚಾರಕ್ಕೆ ಮಹಜರ್ ಮಾಡಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಮುಂದೆ ಯಾವುದೇ ಮಹಜರ್ ಮೂಲಕ ಯಾವುದಾದರೂ ವಸ್ತು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸಹಿ ಮಾಡಿದ ದಿನಾಂಕ ಮತ್ತು ಸಮಯ ನನಗೆ ನೆನಪಿಲ್ಲ. ನ್ಯಾಯಾಲಯದ ಮುಂದಿರುವ ಎಂಒ-1 ರಿಂದ 5 ಸ್ವತ್ತುಗಳನ್ನು ನಾನು ಈ ಹಿಂದೆ ನಾನುನೋಡಿರುವುದಿಲ್ಲ. ಅವುಗಳನ್ನು ಪೋಲೀಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳಿಗೂ ಈ ಪ್ರಕರಣಕ್ಕೂ ಏನು ಸಂಬಂದ ಎಂದು ನನಗೆ ಗೊತ್ತಿಲ್ಲ. ಪೋಲೀಸರಿಗೆ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

3. ದಿಃ25.02.2022 ರಂದು ಪಾಂಡವಪುರ ಟೌನ್ ಸಾರ್ವಜನಿಕ ಆಸ್ಪತ್ರೆಯ ತುರ್ತುನಿಘ ಘಟಕದ ಮುಂದೆ ಚಾಸಾ- 1 ರವರು ಸದರಿ ಸ್ದಳದಲ್ಲಿ ಆರೋಪಿತರು ತಮಗೆ ಬೆದರಿಕೆ ಹಾಕಿ ಎಂಎಲ್‌ಸಿ ಚೀಟಿಗಳನ್ನು ಹರಿದು ಹಾಕಿದ್ದ ಸ್ದಳ ಇದು ಎಂದು ತೋರಿಸಿಕೊಟ್ಟಂತೆ ನನ್ನ ಮತ್ತು ಚಾಸಾ- 9 ರವರನ್ನು ಕರೆಸಿ ಮಹಜರ್ ತಯಾರಿಸಲು ಸಹಕರಿಸಬೇಕೆಂದು ಪೋಲೀಸರು ಹೇಳಿದ ಮೇರೆಗೆ ನಾನು ಒಪ್ಪಿ ಹಾಜರಿದ್ದು ಆ ಸಮಯ ನನ್ನ ಸಮಕ್ಷಮ ಚಾಸಾ- 9 ರವರ ಸಮಕ್ಷಮ ನಿ.ಪಿ.3 ರಂತೆ ಮಹಜರನ್ನು ಮಾಡಿದ್ದು, ಸದರಿ ಮಹಜರಿನಲ್ಲಿ ನಾನು ಸ್ಥಳದಲ್ಲಿ ಪೊಲೀಸರು ಬರೆದಿದ್ದನ್ನು ಓದಿ ನೋಡಿ ಬೆಳಿಗ್ಗೆ 8.30 ರಿಂದ 9.15 ಗಂಟೆಯ ಮದ್ಯೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

4. ಅದೇ ದಿನ ಪಾಂಡವಪುರ ತಾಲ್ಲೂಕು ದೇವೆಗೌಡನಕೊಪ್ಪಲು ಗ್ರಾಮದ ಪಾಂಡವಪುರ ಮಂಡ್ಯ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ 2ನೇ ಆರೋಪಿಯ ಮನೆಯ

ಮುಂಭಾಗ ಚಾಸಾ- 1 ರವರು ತೋರಿಸಿಕೊಟ್ಟಂತೆ ನನ್ನ ಮತ್ತು ಚಾಸಾ–9 ರವರ ಸಮಕ್ಷಮ ನಿ.ಪಿ.2 ರಂತೆ ಪೋಲೀಸರು ಮಹಜರನ್ನು ಮಾಡಿದ್ದು, ಸದರಿ ಮಹಜರಿನಲ್ಲಿ ನಾನು ಸ್ಥಳದಲ್ಲಿ ಪೊಲೀಸರು ಬರೆದಿದ್ದನ್ನು ಓದಿ ನೋಡಿ ಬೆಳಿಗ್ಗೆ 9.45 ರಿಂದ 10.45 ಗಂಟೆಯ ಮದ್ಯೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯ ಚಾಸಾ- 1 ರವರು ಹಾಜರುಪಡಿಸಿದ ಆರೋಪಿತರು ಕೃತ್ಯಕ್ಕೆ ಬಳಸಿದ್ದು ಎಂದು ಹೇಳಲಾದ ಎಂಒ–1 ಕಬ್ಬಿಣದ ರಾಡು, ಎಂಒ–2 ಮತ್ತು 3 ದೊಣ್ಣೆಗಳು, ಎಂಒ–4 ಸೈಜುಗಲ್ಲು ಹಾಗೂ ಚಾಸಾ- 1 ರವರ ಜಖಂಗೊಂಡ ಮೋಬೈಲ್ ಫೋನನ್ನು ಮಹಜರ್ ಮೂಲಕ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸ್ದಳದಲ್ಲಿ ಎಂಒ–1 ರಿಂದ 5 ವಸ್ತುಗಳನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ವಿ ವಕೀಲರಿಂದ**: ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**